**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 13/2020**

**ಪಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 04.12.2024.**

**ಮುಂ. ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ ಪ್ರತಿವಾದಿಗಳ ಪರ ವಕೀಲರುಃ**

7. ನಾನು ನನಗೆ ಎತ್ತುಗಳು ಇರುವ ಬಗ್ಗೆ ಹೇಳಿದ್ದು, ಅವುಗಳನ್ನು ಮಾರುವ ಎಷ್ಟು ವರ್ಷ ಮುಂಚೆ ಖರೀದಿ ಮಾಡಿದ್ದೆ ಅಂತ ನನಗೆ ಲಕ್ಷ್ಯಕ್ಕೆ ಇಲ್ಲ. ಹಿರಿಯರ ಆಸ್ತಿಯಿಂದ ಬಂದ ಆದಾಯದಿಂದ ನಾನು ಆ ಎತ್ತುಗಳನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಹಿರಿಯರ ಹೊಲದಿಂದಲೂ ಉತ್ಪನ್ನ ಬರುತಿತ್ತು ಮತ್ತು ನಾನು ಬೇರೆ ಕಡೆ ಹೊಲ ಸಹ ಮಾಡುತಿದ್ದೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಬಂದ ಉತ್ಪನ್ನದಿಂದ ಎರಡು ಎತ್ತುಗಳನ್ನು ಖರೀದಿ ಮಾಡಿರುತ್ತೇನೆ.

8. ನನಗೆ ದಾವಾ ಆಸ್ತಿಯ ನಂಬರ, ಕ್ಷೇತ್ರ ಹಾಗೂ ಚೆಕ್ಕಬಂದಿ ಹೇಳಲಾಗುವುದಿಲ್ಲ. ಈ ದಾವಾ ಆಸ್ತಿ ಯಾರ ಕಬ್ಜಾ ಇದೆ ಅಂತ ಹೇಳಲಾಗುತ್ತಾ ಎಂದರೆ ಸಾಕ್ಷಿ ನನ್ನ ಕಬ್ಜೆಯಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಕಬ್ಜಾವಹಿವಾಟನ್ನು ನೀವು ಮಾಲೀಕಿನಾತೆಯಿಂದ ಮಾಡುತಿದ್ದರೋ ಅಥವಾ ಬೇರೆ ಯಾರಿಂದಲ್ಲೂ ಪರವಾನಗಿ ಪಡೆದು ಮಾಡುತಿದ್ದೀರಾ ಎಂದರೆ ಸಾಕ್ಷಿ ಮಾಲ್ಕೀನಾತೆಯಿಂದ ಎಂದು ನುಡಿಯುತ್ತಾರೆ. ಈ ದಾವೆ ಬರೆಯಲು ವಕೀಲರಿಗೆ ಮಾಹಿತಿ ನಾನು ಒಬ್ಬನೇ ನೀಡಿರುತ್ತೇನೆ.

9. ದಾವಾ ಆಸ್ತಿ ಒಳಗೆ ಏನೇನು ಇದೆ ಅಂತ ಹೇಳಲಾಗುತ್ತಾ ಎಂದರೆ ಸಾಕ್ಷಿ ಏನೂ ಇಲ್ಲ ಅದು ಕರೆ ಹೊಲ ಎಂದು ನುಡಿಯುತ್ತಾರೆ. ಸದರಿ ಕರೆ ಹೊಲ ಪೂರ್ತಿ ಈಗ ಸಾಗುವಳಿ ಇದಿಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯಲ್ಲಿ ಪೀಕು ಬರುತ್ತಾ ಅಥವಾ ಖಾಲಿ ಬಿದ್ದಿದೆ ಎಂದರೆ ಸಾಕ್ಷಿ ಏನು ಬರುವುದಿಲ್ಲ ಎಂದು ನುಡಿಯುತ್ತಾರೆ.

10. ನನ್ನ ಮಗಳು 2 ನೇ ವಾದಿ ಮಂಜುಳಾ ಮದುವೆಯಾಗಿದ್ದು, ಅವರು ಶಿರೂರು ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು ದಾವಾದಲ್ಲಿ ಮನೆ ಮತ್ತು ಹೊಲವನ್ನು ಸೇರಿಸಿದ್ದು, ಸದರಿ ದಾವಾ ಮನೆಯಲ್ಲಿ ಯಾರು ವಾಸವಾಗಿದ್ದೀರಾ ಎಂದರೆ ಸಾಕ್ಷಿ ನಾನು ಮತ್ತು 2 ನೇ ವಾದಿ ಎಂದು ನುಡಿಯುತ್ತಾರೆ. ಈಗ ಪ್ರಸ್ತುತ ದಾವಾ ಮನೆಯಲ್ಲಿ ನೀವು ಒಬ್ಬರೇ ವಾಸವಾಗಿದ್ದೀರಾ ಎಂದರೆ ಸಾಕ್ಷಿ ನಾನು ಮತ್ತು 2 ನೇ ವಾದಿ ಎಂದು ನುಡಿಯುತ್ತಾರೆ. ದಾವಾ ಮನೆಯಲ್ಲಿ ನೀವು ಮತ್ತು 2 ನೇ ವಾದಿ ಮಾತ್ರ ವಾಸವಾಗಿರುವ ಬಗ್ಗೆ ವಾದ ಪತ್ರದಲ್ಲಿ ಬರೆಸಿದ್ದೀರಾ ಅಥವಾ ನಿಮ್ಮ ವಾದ ಪತ್ರದಲ್ಲಿ ನೀವು ದಾವಾ ಬಿಲ್ಡಿಂಗನಲ್ಲಿ ನಾನು, ನನ್ನ ಹೆಂಡತಿ ಹಾಗೂ ಪ್ರತಿವಾದಿಯರು ಕೂಡಿ ಇರಲು ಪ್ರಾರಂಭಿಸಿದೇವು ಅಂತ ಖಂಡಿಕೆ 7 ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ.

11. ನಿಮ್ಮ ಮತ್ತು ನಿಮ್ಮ ಗಂಡು ಮಕ್ಕಳ ನಡುವೆ ಬಿನ್ನಾಭಿಪ್ರಾಯ ಏನಾದರು ಪ್ರಾರಂಭ ಆಯಿತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಇಂದಿನವರೆಗೂ ನೀವು ಮತ್ತು ನಿಮ್ಮ ಗಂಡು ಮಕ್ಕಳು ಛಲೋ ಇದ್ದೀರಾ ಎಂದರೆ ಸಾಕ್ಷಿ 10 ವರ್ಷದಿಂದ ಅವರ ಸಂಪರ್ಕವೇ ಇಲ್ಲ ಎಂದು ನುಡಿಯುತ್ತಾರೆ. ನಾನು ಅವರ ಸಂರ್ಪಕ ಇಲ್ಲ ಅಂತ ಹೇಳಿದ್ದು, ಹಾಗೀದ್ದರೇ ಅವರು ಎಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿ ದಾವಾ ಆಸ್ತಿ ಹೊಲದ ಪಕ್ಕದಲ್ಲಿ 8 ಗುಂಟೆ ಎನ್ ಎ ಮಾಡಿಸಿದ ಜಾಗದಲ್ಲಿ ಇದೆ ಎಂದು ನುಡಿಯುತ್ತಾರೆ. 8 ಗುಂಟೆ ಜಮೀನು ಎನ್ ಎ ಆಗಿದೆ ಎನ್ನುವ ಜಮೀನನ್ನು ಈ ದಾವೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿ ಇದೇ ಬೇರೆ ಇದೆ, ಅದೇ ಬೇರೆ ಇದೆ ಎಂದು ನುಡಿಯುತ್ತಾರೆ.

12. ದನದ ಶೆಡ್ಡು ಇದೆ ಅಂತ ನಾನು ಹೇಳಿದ್ದು ಅದನ್ನು ನಾನೇ 20 ವರ್ಷದ ಹಿಂದೆ

ಕಟ್ಟಿಸಿರುತ್ತೇನೆ. ಅದನ್ನು ಕಟ್ಟಲು ಪಡೆದ ಪರವಾನಗಿಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎಂದುನುಡಿಯುತ್ತಾರೆ. ನನಗೆ ದನದ ಶೆಡ್ಡಿನ ಪೂರ್ವ ಪಶ್ಚಿಮ ಮತ್ತು ಉತ್ತರ  ದಕ್ಷಿಣ ಅಳತೆ ಹೇಳಲಾಗುವುದಿಲ್ಲ. ಸದರಿ ಶೆಡ್ಡನ್ನು ಯಾವತ್ತಾದರೂ ಟೇಪನಿಂದ ಅಳೆದಿದ್ದೀರಾ ಎಂದರೆ ಸಾಕ್ಷಿ ಅದು ಪೂರ್ವ ಪಶ್ಚಿಮ 40 ಪೂಟು ಹಾಗೂ ಉತ್ತರ ದಕ್ಷಿಣ 40 ಪೂಟು ಇದೆ ಎಂದು ನುಡಿಯುತ್ತಾರೆ. ಸದರಿ ಅಳತೆ ಶೆಡ್ಡು ಕಟ್ಟುವ ಸಮಯದಲ್ಲಿಯೇ ಗೊತ್ತಾಗಿರುತ್ತದೆ. ನಾನು ದಾವಾ ಬರೆಸುವ ಸಮಯದಲ್ಲಿ ಸದರಿ ಶೆಡ್ಡುನ ಅಳತೆ 40x40 ಇದೆ ಅಂತ ವಕೀಲರಿಗೆ ಮಾಹಿತಿ ಕೊಟ್ಟಿದ್ದನೋ ಅಥವಾ ಇಲ್ಲವೋ ಅಂತ ನನಗೆ ಲಕ್ಷ್ಯಕ್ಕೆ ಇಲ್ಲ.

13. ದಾವಾ ಆಸ್ತಿಯನ್ನು ನಾನ ಪರಾಧೀನ ಮಾಡಿದ್ದು, ಅದನ್ನು ನಾನು 2 ನೇ ವಾದಿಗೆ ದಾನ ಪತ್ರದ ಮೂಲಕ ನೀಡಿರುತ್ತೇನೆ. ಈ ರೀತಿ ದಾನ ಪತ್ರ ಮಾಡಿ ಸದರಿ ಆಸ್ತಿ ಕಬ್ಜಾವನ್ನು 2 ನೇ ವಾದಿಗೆ ನೀಡಿರುತ್ತೇನೆ. ಈ ರೀತಿ ದಾನ ಪತ್ರ ಮಾಡಿದ ನಂತರ ಆ ಆಸ್ತಿಯಲ್ಲಿ ನಿಮಗೆ ಏನಾದರು ಹಕ್ಕು ಉಳುದಿದಿಯಾ ಎಂದರೆ ಸಾಕ್ಷಿ ಇದೆ , ಆ ಬಗ್ಗೆ ಆದೇಶ ಆಗಿದೆ ಎಂದು ನುಡಿಯುತ್ತಾರೆ. ಸದರಿ ಆದೇಶ ಎಲ್ಲಿ ಆಗಿದ್ದು ಎಂದರೆ ಸಾಕ್ಷಿ ಇದೇ ನ್ಯಾಯಾಲಯದಲ್ಲಿ ಎಂದು ನುಡಿಯುತ್ತಾರೆ. ದಾವಾ ಆಸ್ತಿ ನಿಮ್ಮ ಮಾಲ್ಕೀಕಬ್ಜಾದ್ದು ಅಂತ ನಿಮ್ಮ ಪರ ಆದೇಶ ಆಗಿದಿಯಾ ಎಂದರೆ ಸಾಕ್ಷಿ ಆಗಿದೆ ಎಂದು ನುಡಿಯುತ್ತಾರೆ. ಈ ರೀತಿ ಆದೇಶ ದಾನ ಪತ್ರ ಮಾಡುವ ಮುನ್ನ ಆಗಿದಿಯೋ ಅಥವಾ ದಾನ ಪತ್ರ ಮಾಡಿದ ನಂತರ ಆಗಿದಿಯೋ ಎಂದರೆ ಸಾಕ್ಷಿ ದಾನ ಪತ್ರ ಆದ ನಂತರ ಎಂದು ನುಡಿಯುತ್ತಾರೆ. ನಾನು ಕಟ್ಟಿರುವ ದನದ ಶೆಡ್ಡು ಅಂತ ಹೇಳಿದ್ದು , ಅದರಲ್ಲಿ ಯಾರು ವಾಸವಾಗಿದ್ದಾರೆ ಎಂದರೆ ಸಾಕ್ಷಿ ನನ್ನ ಮಗ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ 2 ನೇ ಪ್ರತಿವಾದಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ಅವರು ಮಾಲೀಕರು ಅಂತ ವಾಸವಾಗಿದ್ದಾರಾ ಎಂದರೆ ಸಾಕ್ಷಿ ಅವರು ಹಾಗೇ ಇದ್ದಾರೆ, ಅದು ನನ್ನ ಮಾಲ್ಕೀಯದ್ದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು

ಹಿರಿಯರು ಕೂಡಿ ಅವರಿಗೆ ಇರಲಿಕ್ಕಿ ಕೊಟ್ಟಿದ್ದು ಎಂದು ನುಡಿಯುತ್ತಾರೆ. ಅದನ್ನು ಈಗ ಐದಾರು ವರ್ಷದ ಹಿಂದೆ ಕೊಟ್ಟಿರುತ್ತಾರೆ.

14. ಸದರಿ ಹಿರಿಯರ ಹೆಸರು ಹನಮಂತಗೌಡ ಪಾಟೀಲ ಇವರು ಆಗಿರುತ್ತಾರೆ. ಈ ಶೆಡ್ಡಿನಲ್ಲಿ ಇರುವ ಬಗ್ಗೆ ಯಾವುದೇ ಕಾಗದ ಪತ್ರ ಆಗಿರುವುದಿಲ್ಲ. ಸದರಿ ಶೆಡ್ಡಿನಲ್ಲಿ ಎಷ್ಟು ವರ್ಷದವರೆಗೆ ಇರುವ ಬಗ್ಗೆ ಮಾತುಕತೆ ಆಗಿದೆ ಎಂದರೆ ಸಾಕ್ಷಿ ಈ ಕೇಸು ನಡೆಯುವಾಗ ಕಬ್ಜಾ ಕೊಟ್ಟಿದ್ದೇನೆ, ಈ ಕೇಸು ಮುಗಿದಾಗ ಅವರು ಕಬ್ಜಾಬಿಡಬೇಕು ಎಂದು ನುಡಿಯುತ್ತಾರೆ. ನಾನು ಈ ಕೇಸು ಹಾಕಿದಾಗ ಸದರಿ ಶೆಡ್ಡಿನ ಕಬ್ಜಾ ನನ್ನದು ಇತ್ತು. ದಾವಾ ಆಸ್ತಿಗೆ ಮತ್ತು ಪ್ರತಿವಾದಿಗಳು ವಾಸವಾಗಿರುವ ಶೆಡ್ಡಿಗೆ ಒಂದಕ್ಕೊಂದು ಸಂಬಂದ ಇರುವುದಿಲ್ಲ ಎಂದರೆ ಸಾಕ್ಷಿ ಸಂಬಂಧ ಇಲ್ಲ

ಎಂದು ನುಡಿಯುತ್ತಾರೆ.

15. ಸಾಕ್ಷಿಗೆ ನಿಪಿಃ9 ನ್ನು ತೋರಿಸಿ ಅದರಲ್ಲಿ ಕಾಣುತ್ತಿರುವ ನೀಲಿ ಬಣ್ಣದ ಶೆಡ್ಡಿನ ಹಿಂದೆ ಇರುವ ಬಿಳಿ ಬಣ್ಣದ ಮನೆ ಯಾರದ್ದು ಎಂದರೆ ಸಾಕ್ಷಿ ನನ್ನದ್ದು ಎಂದು ನುಡಿಯುತ್ತಾರೆ. ಬಿಳಿ ಮನೆ ದಾಟಿ ಹಿಂದೆ ಇನ್ನೊಂದು ಮನೆ ಕಾಣುತಿದ್ದು ಅದು ಯಾರದ್ದು ಎಂದರೆ ಸಾಕ್ಷಿ ಅದು ನನ್ನದೇ ಎಂದು ನುಡಿಯುತ್ತಾರೆ. ಮೊದಲನೇದಾಗಿ ಕಾಣುತ್ತಿರುವ ಬಿಳಿ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದರೆ ಸಾಕ್ಷಿ ನಾನು ಮತ್ತು ನನ್ನ ಹೆಂಡತಿ ಎಂದು ನುಡಿಯುತ್ತಾರೆ. ಅದೇ ರೀತಿ ಸದರಿ ಬಿಳಿ ಮನೆ ಪಕ್ಕದಲ್ಲಿ ಕಾಣುವ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದರೆ ಸಾಕ್ಷಿ ಮೊದಲನೆಯದಾಗಿ ಪ್ರತಿವಾದಿಯರು ಎಂದು ನುಡಿದು, ನಂತರದಲ್ಲಿ ಅದು ಸಹ ದನದ ಶೆಡ್ಡು ಅದನ್ನು ನಾನು ಆರ್ ಸಿ ಸಿ ಯಿಂದ ಕಟ್ಟಿಸಿರುತ್ತೇನೆ ಎಂದು ನುಡಿಯುತ್ತಾರೆ.

16. ನಿಪಿಃ9 ರಲ್ಲಿ ಕಾಣುವ ನೀಲಿ ಶೆಡ್ಡನ್ನು ಸಾಕ್ಷಿ ಯಾವ ಇಸ್ವಿಯಲ್ಲಿ ಕಟ್ಟಿದ್ದು ಲಕ್ಷ್ಯ ಇಲ್ಲ ಎಂದು ನುಡಿಯುತ್ತಾರೆ. ಸದರಿ ಶೆಡ್ಡು ಯಾರು ಕಟ್ಟಿಸಿದ್ದು ಎಂದರೆ ಸಾಕ್ಷಿ 1 ನೇ ಪ್ರತಿವಾದಿ ಕಟ್ಟಿಸಿದ್ದು ಎಂದು ನುಡಿಯುತ್ತಾರೆ. ಅದನ್ನು ಅವನು ನನ್ನ ಬಿನ್ ಶೇತ್ಕಿ ಪ್ಲಾಟಿನಲ್ಲಿ ಕಟ್ಟಿಸಿರುತ್ತಾನೆ. ಆ ಪ್ಲಾಟನ ನಂಬರ ಹೇಳಲಾಗುವುದಿಲ್ಲ. ಆ ಶೆಡ್ಡು ಎನ್ ಎ ಪ್ಲಾಟನಲ್ಲಿ ಕಟ್ಟಿದ್ದಾನೆ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ9 ರಲ್ಲಿ ಕಾಣುವ ನೀಲಿ ಶೆಡ್ಡಿನಲ್ಲಿ ಯಾರು ವಾಸವಾಗಿರುವುದಿಲ್ಲ, ಅದು ಖಾಲಿ ಇದೆ.

17. 2 ನೇ ವಾದಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇದಿಯಾ ಎಂದರೆ ಸಾಕ್ಷಿ ತೊಂದರೆ ಇರುವುದಿಲ್ಲ ಎಂದು ನುಡಿದಿದ್ದು. ಈ ದಾವೆಯಲ್ಲಿ ನಾನು ನಮ್ಮ ಜಾಗದ ಕಬ್ಜಾ ಬಿಟ್ಟುಕೊಡಬೇಕು ಅಂತ ಕೇಳಿರುತ್ತೇನೆ. ಹಾಗೇ ಕಬ್ಜಾ ಕೇಳಿ ಈ ದಾವೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಕೇಳಿದ ಯಾವುದೇ ದಾವಾ ಪರಿಹಾರಕ್ಕೆ ನಾನು ಮತ್ತು ನನ್ನ

ಮಗಳು 2 ನೇ ವಾದಿ ಅರ್ಹರು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಈ ದಾವೆಗೆ ತಕರಾರು ಹಾಕಿದ್ದು, ಅದನ್ನು ಓದಿಸಿ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಸಿಲ್ಲ, ಸಾಕ್ಷಿ ಮುಂದುವರೆದು ಅವರ ಮುಖಾನೇ ನೋಡಲು ಬೇಡಾಗಿದೆ ಎಂದು ನುಡಿಯುತ್ತಾರೆ.

18. ನಾನು ಮತ್ತು ನನ್ನ ಹೆಂಡತಿ ದಾವ ಆಸ್ತಿಗೆ ಸಂಬಂದಪಟ್ಟ ಹಾಗೇ ಪ್ರತಿವಾದಿಯರ ವಿರುದ್ಧ ದೂರು ದಾಖಲಿಸಿ ಆ ಬಗ್ಗೆ ಪ್ರಕರಣ ಮೇಲಿನ ನ್ಯಾಯಾಲಯದಲ್ಲಿ ನಡೆದಿತ್ತಾ ಎಂದರೆ ಸಾಕ್ಷಿ ಹೌದು ದಾಖಲಿಸಿದ್ದೇವು, ಅದು ಪ್ರಕರಣ ನಡೆದಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರಕರಣ ಚೌಕಾಶಿಯಾಗಿ ಪ್ರತಿವಾದಿಯರ ಬಿಡುಗಡೆ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ನನ್ನ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಇಂದಿನವರೆಗೂ ನನ್ನ ಮತ್ತು 2 ನೇ ವಾದಿಯ ಕಬ್ಜಾಹಿವಾಟಿನಲ್ಲಿ ಇದೆ. ನನ್ನ ಮತ್ತು ಪ್ರತಿವಾದಿಯರ ನಡುವೆ ಸಂಬಂಧ ಸರಿ ಇಲ್ಲದ ಕಾರಣ ಈ ಸುಳ್ಳು ದಾವೆಯನ್ನು ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**